# ಶಾಲೆಗಳು ಪುನರಾರಂಭಗೊಂಡಾಗ ನಮ್ಮ ಶಿಕ್ಷಕರಿಗೆ ಎದುರಾಗುವ ಸನ್ನಿವೇಶಗಳೇನು?

ವಿಮಲಾ ರಾಮಚಂದ್ರನ್

## ಹಿನ್ನೆಲೆ

ಶಾಲೆಗಳು ಮುಚ್ಚಿ ಸುಮಾರು ಎರಡು ವರ್ಷಗಳೇ ಕಳೆದು ಹೋದವು. ಕೋವಿಡ್-19 ಪಿಡುಗು, ಮಕ್ಕಳು ಮತ್ತು ಶಿಕ್ಷಕರ ಮೇಲೆ ವಿನಾಶಕಾರಿ ಪರಿಣಾಮವನ್ನು ಬೀರಿತು. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು, ಶಾಲೆಗಳು ಮುಚ್ಚಿದುದರಿಂದ ಉಂಟಾದ ವಿಪರೀತ ಹಾನಿಗೆ ಪ್ರತಿಕ್ರಿಯಿಸಲು ಪ್ರಾರಂಭಿಸಿವೆ. ಆನ್‌ಲೈನ್ ಕಲಿಕೆಯ ಅಂತರ್ಗತ ಅಸಮಾನತೆಯ ಕುರಿತು ಒಂದಷ್ಟು ಚರ್ಚೆಗಳು ನಡೆದಿದ್ದರೂ, ನಮ್ಮ ಶಿಕ್ಷಕರು ಶಾಲೆಗೆ ಮರಳುವಾಗ ಏನೆಲ್ಲ ಎದುರಿಸಬೇಕು ಎನ್ನುವ ಕುರಿತು ಗಂಭೀರ ಚರ್ಚೆ ನಡೆದಿಲ್ಲ. ಸಾಂಕ್ರಾಮಿಕದ ನಂತರ ಶಾಲೆಗಳು ಮತ್ತೆ ಕಾರ್ಯಾರಂಭಗೊಳ್ಳುವ ಕುರಿತ ಈ ಹಿಂದಿನ ಪ್ರಬಂಧದಲ್ಲಿ (ಲರ್ನಿಂಗ್ ಕರ್ವ್, 2020), ಶಿಕ್ಷಕರು ಮತ್ತು ಶೈಕ್ಷಣಿಕ ಆಡಳಿತಗಾರರು ಎದುರಿಸುವ ಕೆಲವು ಸವಾಲುಗಳನ್ನು ನಾನು ವಿವರಿಸಿದ್ದೆ. ಶಾಲೆಗಳ ಮುಚ್ಚುಗಡೆಯಿಂದ ಮಕ್ಕಳ ಮೇಲೆ ಉಂಟಾದ ಪ್ರಭಾವ, ಗುತ್ತಿಗೆ ಆಧಾರಿತ ಶಿಕ್ಷಕರ ಅನಿಶ್ಚಿತ ಉಪಸ್ಥಿತಿ, ಖಾಸಗಿ ಶಾಲೆಗಳಲ್ಲಿ ಉದ್ಯೋಗ ನಷ್ಟ ಮತ್ತು ಆನ್‌ಲೈನ್ ಮತ್ತು ವಾಟ್ಸಾಪ್ ಮೂಲಕ ಕಲಿಸಲು ಶಿಕ್ಷಕರ ಮೇಲಿದ್ದ ವಿಪರೀತ ಒತ್ತಡ, ಕಾರ್ಯಹಾಳೆಗಳನ್ನು ವಿತರಿಸುವುದು, ಮೊಹಲ್ಲಾ ತರಗತಿಗಳನ್ನು ನಡೆಸುವುದು ಮತ್ತು ಮನೆಯಲ್ಲಿರುವ ಮಕ್ಕಳನ್ನು ಸಂಪರ್ಕಿಸುವುದು ಮುಂತಾದ ವಿಷಯಗಳ ಕುರಿತು ನಮ್ಮಲ್ಲಿ ಈಗ ಸಾಕಷ್ಟು ಮಾಹಿತಿಗಳಿವೆ.

## ಅಂಕಿ ಅಂಶಗಳು

ಇತ್ತೀಚೆಗೆ ನಡೆಸಿದ ಗುಣಾತ್ಮಕ ಸಮೀಕ್ಷೆಯ ಪ್ರಕಾರ ನಗರದ ಮಕ್ಕಳಲ್ಲಿ ನಾಲ್ಕನೇ ಒಂದು ಹಾಗು ಗ್ರಾಮೀಣ ಪ್ರದೇಶದಲ್ಲಿ ಎಂಟು ಶೇಕಡಾ ವಿದ್ಯಾರ್ಥಿಗಳು ಮಾತ್ರವೇ ಆನ್‌ಲೈನ್ ಕಲಿಕೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಯಾವುದೇ ಮಾನದಂಡದ ಪ್ರಕಾರದಲ್ಲಿಯೂ ಇದು ಆಘಾತಕಾರಿ ಅಂಕಿ ಅಂಶವೆನಿಸುತ್ತದೆ. ಇತ್ತೀಚಿನ ಈ ಸಮೀಕ್ಷೆಯು, ಆನ್‌ಲೈನ್ ಶಿಕ್ಷಣವು ಐಷಾರಾಮಿ ವ್ಯವಸ್ಥೆಯಾಗಿದ್ದು, ನಮ್ಮ ದೇಶದಲ್ಲಿ ಕೆಲವೇ ಕೆಲವು ಮಂದಿ ಮಾತ್ರವೇ ಇದನ್ನು ಪಡೆಯಬಹುದಾಗಿದೆ ಎಂಬ ನಾವು ಈಗಾಗಲೇ ತಿಳಿದಿರುವ ಅಂಶವನ್ನು ಪುನರುಚ್ಚರಿಸುತ್ತದೆ. ಇನ್ನೂ ಗಮನಿಸಬೇಕಾದ ವಿಷಯವೆಂದರೆ 90 ಶೇಕಡಾದಷ್ಟು ನಗರ ಮತ್ತು 97 ಶೇಕಡಾದಷ್ಟು ಗ್ರಾಮೀಣ ಭಾಗದ ಪೋಷಕರು ಶಾಲೆಗಳನ್ನು ಮರುತೆರೆಯುವುದನ್ನು ಬಯಸುತ್ತಿದ್ದಾರೆ. ಈ ಸಮೀಕ್ಷೆಯು ಮೂಲಭೂತವಾಗಿ ಅವಕಾಶ ವಂಚಿತ ಪ್ರದೇಶಗಳು/ಸಮುದಾಯಗಳನ್ನು ಕೇಂದ್ರೀಕರಿಸಿತ್ತು. ಅಲ್ಲದೆ ಪೂರ್ವ ಪ್ರಾಥಮಿಕ ತರಗತಿಯಿಂದ XIIನೇ ತರಗತಿಯ ತನಕ ಶಾಲೆಗಳನ್ನು ಸರ್ಕಾರವು ಮತ್ತೆ ಪ್ರಾರಂಭಿಸಬೇಕು ಎನ್ನುವ ತುರ್ತು ಜ್ಞಾಪನೆಯನ್ನು ಇದು ನೀಡಿದೆ.  ಕರ್ನಾಟಕದ 24 ಜಿಲ್ಲೆಗಳಲ್ಲಿ ನಡೆಸಿದ ಎಎಸ್ಇಆರ್[ii] ಅಧ್ಯಯನವು, ಸರ್ಕಾರಿ ಶಾಲೆಗಳ ದಾಖಲಾತಿಯಲ್ಲಿ ಒಂದಷ್ಟು ಪ್ರಮಾಣದಲ್ಲಿ ಹೆಚ್ಚಳ (ಅನೇಕ ಖಾಸಗಿ ಶಾಲೆಗಳು ಮುಚ್ಚಿರುವ ಕಾರಣ ಅಥವಾ ಪೋಷಕರಿಗೆ ಫೀಸು ಕಟ್ಟಲು ಸಾಧ್ಯವಾಗದ ಕಾರಣ), ಬುನಾದಿ ಕೌಶಲ್ಯಗಳಲ್ಲಿ ಸ್ಪಷ್ಟ ಹಿನ್ನಡೆ ಉಂಟಾಗಿ ಓದುವಿಕೆ ಮತ್ತು ಸಂಖ್ಯಾ ಜ್ಞಾನದಲ್ಲಿ ದೊಡ್ಡ ಪ್ರಮಾಣದಲ್ಲಿ ಕುಸಿತ ಉಂಟಾಗಿರುವುದನ್ನು ಬಹಿರಂಗಪಡಿಸಿದೆ (ಎಎಸ್ಇಆರ್, ಸೆಪ್ಟೆಂಬರ್ 2021). ನಾವು ಈಗಾಗಲೇ ಸಾಕಷ್ಟು ವಿಚಾರಗಳನ್ನು ತಿಳಿದುಕೊಂಡಿದ್ದೇವೆ. ಹಾಗಾದರೆ ಶಾಲೆಗಳು ಮತ್ತೆ ಕಾರ್ಯಾರಂಭಿಸಿದಾಗ ನಮ್ಮ ಶಾಲಾ ಶಿಕ್ಷಕರು ಎದುರಿಸಬಹುದಾದ ಸವಾಲುಗಳೇನು?

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾಧ್ಯಮಗಳು ಶಿಕ್ಷಣದ ಕಣ್ಗಾವಲಿನಿಂದ ತಪ್ಪಿಸಿಕೊಂಡ- 'ಕಾಣೆಯಾಗಿರುವ ಮಕ್ಕಳ' ಕುರಿತು ಸಾಕಷ್ಟು ವರದಿ ಮಾಡುತ್ತಿವೆ. ಅವರು ಆನ್‌ಲೈನ್ ತರಗತಿಗಳಿಗೆ ಹಾಜರಾಗಿಲ್ಲ. ಅಥವಾ ಸ್ಥಳೀಯ ಮುಖತಃ ತರಗತಿಗಳು ಅಥವಾ ಚಟುವಟಿಕೆಗಳಲ್ಲಿ ಪಾಲ್ಗೊಂಡಿಲ್ಲ. ಅವರಲ್ಲಿ ಹೆಚ್ಚಿನವರು ದುಡಿಮೆಯಲ್ಲಿ ತೊಡಗಿಕೊಂಡಿದ್ದಾರೆ. ಬಾಲಕಾರ್ಮಿಕರಾಗಿ ಜೀತ ಪದ್ಧತಿಗೆ ಅವರನ್ನು ತಳ್ಳಲಾಗಿದೆ, ಮದುವೆ ಮಾಡಿ ಕೊಡಲಾಗಿದೆ, ಮನೆಯಲ್ಲೇ ಮಕ್ಕಳನ್ನು/ಒಡಹುಟ್ಟಿದವರನ್ನು ನೋಡಿಕೊಳ್ಳುತ್ತಿದ್ದಾರೆ ಅಥವಾ ತಮ್ಮ ಪೋಷಕರ ಜೊತೆ ಕೆಲಸಕ್ಕೆ ಸೇರಿಕೊಂಡಿದ್ದಾರೆ. ಭಾರತದಲ್ಲಿ ಇಂತಹ ಎಷ್ಟು ಮಕ್ಕಳು ಇದ್ದಾರೆ ಎನ್ನುವ ಕುರಿತು ನಮಗೆ ಯಾವುದೇ ಅಂದಾಜು ಇಲ್ಲ. ಎಲ್ಲಾ ಹಳೆಯ 'ಶಾಲೆಯಿಂದ ಹೊರಗಿರುವ ಮಕ್ಕಳ ಸಮೀಕ್ಷೆ' ವರದಿಗಳಿಗೆ, ಬದಲಾಗಿರುವ ಈ ಕೋವಿಡ್-19 ಸಂಬಂಧಿತ ಲಾಕ್‌ಡೌನ್ ದಿನಗಳಲ್ಲಿ ಹೆಚ್ಚೇನೂ ಪ್ರಾಮುಖ್ಯತೆ ಸಿಗಲಾರದು.ಈ ಮಕ್ಕಳನ್ನು ಹುಡುಕುವ ಜವಾಬ್ದಾರಿಯನ್ನು ಶಿಕ್ಷಕರು, ಶಾಲಾ ಮುಖ್ಯಸ್ಥರು ಹಾಗು ಉಳಿದದ್ದನ್ನು ಶಾಲಾ ಆಡಳಿತ ಸಮಿತಿಯು ಹೊರಬೇಕು ಎಂಬುದು ಸಾರ್ವತ್ರಿಕವಾಗಿ ಸ್ವೀಕರಿಸಲಾದ ಸತ್ಯವೆನಿಸಿದೆ. ಹಳ್ಳಿಯಿಂದ ಹಳ್ಳಿಗೆ, ನಗರದ ಪ್ರತಿ ವಾರ್ಡುಗಳಿಗೆ, ಕಡಿಮೆ ಸಂಬಳಕ್ಕೆ ದುಡಿಸುವ ಸ್ಥಳೀಯ ಕಾರ್ಖಾನೆಗಳು, ಢಾಬಾಗಳು, ಇಟ್ಟಿಗೆ ಕಾರ್ಖಾನೆಗಳು, ಜಮಖಾನೆ ಹೊಲಿಯುವ ಕಾರ್ಖಾನೆಗಳು, ಲೋಹ/ಆಭರಣ/ ಕಲ್ಲು ಕತ್ತರಿಸುವ ಕಾರ್ಖಾನೆಗಳು ಮೊದಲಾದ ಕಡೆಗಳಿಗೆ ಹೋಗಿ ಪ್ರತಿ ಸರ್ಕಾರವೂ ಮಕ್ಕಳ ಸಮೀಕ್ಷೆ ನಡೆಸದ ಹೊರತು ಸಮಸ್ಯೆಯ ಗಂಭೀರತೆಯು ನಮ್ಮ ಅರಿವಿಗೆ ಬರದು. ಇದನ್ನು ಮಾಡಲು ಇರುವ ಒಂದು ದಾರಿ ಎಂದರೆ ಪೋಷಕರು-ಶಿಕ್ಷಕರ ಸಭೆಗಳನ್ನು ನಡೆಸುವುದು. ಯಾರೆಲ್ಲ ಮಕ್ಕಳ ಪೋಷಕರು ಬಂದಿದ್ದಾರೆ ಎಂಬುದನ್ನು ಗಮನಿಸುವುದು ಹಾಗು ಬಾರದ ಪೋಷಕರ ಮನೆಗಳಿಗೆ ಭೇಟಿ ನೀಡುವುದು. ದೆಹಲಿ ಸರ್ಕಾರವು ಎರಡು ವಾರಗಳ ಕಾಲ ತರಗತಿವಾರು ಪೋಷಕರು ಮತ್ತು ಶಿಕ್ಷಕರ ಸಭೆಯನ್ನು ನಡೆಸಿತು ಹಾಗು ಹಾಜರಾತಿಯನ್ನು ತುಂಬಾ ಎಚ್ಚರಿಕೆಯಿಂದ ಗಮನಿಸಿತು. ಸುಮಾರು 70 ಶೇಕಡಾದಷ್ಟು ಮಕ್ಕಳ ಪೋಷಕರು ಹಾಜರಾಗಿದ್ದರು. ಮಕ್ಕಳ ಹಕ್ಕುಗಳ ಆಯೋಗದೊಂದಿಗೆ ಶಿಕ್ಷಣ ಇಲಾಖೆ ಮತ್ತು ಕಾರ್ಮಿಕ ಇಲಾಖೆಯು 'ಕಾಣೆಯಾಗಿರುವ ಮಕ್ಕಳನ್ನು' ಗುರುತಿಸುವ ಕೆಲಸವನ್ನು ತಕ್ಷಣವೇ ಪ್ರಾರಂಭಿಸಿ ಅವರನ್ನು ಮತ್ತೆ ಮನೆಗೆ ಮತ್ತು ಶಾಲೆಗೆ ಕರೆತರುವ ಕೆಲಸವನ್ನು ಮಾಡಬೇಕು. ಶಾಲೆಗಳು ಪುನರಾರಂಭಗೊಳ್ಳುವ ಮೊದಲೇ ಈ ಕೆಲಸವನ್ನು ಮಾಡಬೇಕು ಮತ್ತು ಕನಿಷ್ಠ ಒಂದು ವರ್ಷದ ಕಾಲ ಇದು ಮುಂದುವರಿಯಬೇಕು. ಹೀಗೆ ಮಾಡಿದರೆ ಮಾತ್ರವೇ ಪ್ರತಿಯೊಂದು ಮಗುವನ್ನೂ ಮರಳಿ ಶಾಲೆಗೆ ಕರೆತರಬಹುದು.

| ಮಕ್ಕಳ ಮಾದರಿಯ ಪ್ರಮಾಣ (%): | ನಗರ | ಗ್ರಾಮೀಣ |
|---|---|---|
| ನಿರಂತರವಾಗಿ ಆನ್‌ಲೈನ್ ಕಲಿಕೆಯಲ್ಲಿ ಪಾಲ್ಗೊಳ್ಳುವವರು | 24 | 8 |
| ಇತ್ತೀಚಿನ ದಿನಗಳಲ್ಲಿ ಕಲಿಯದೆ ಇದ್ದವರು | 19 | 37 |
| ಕಳೆದ 30 ದಿನಗಳಲ್ಲಿ ತಮ್ಮ ಶಿಕ್ಷಕನನ್ನು (ರನ್ನು) ಭೇಟಿಯಾಗದೆ ಇದ್ದವರು | 51 | 58 |
| ಕಳೆದ ಮೂರು ತಿಂಗಳುಗಳಲ್ಲಿ ಪರೀಕ್ಷೆ ಬರೆಯದವರು | 52 | 71 |
| ಕೆಲವೇ ಪದಗಳಿಗಿಂತ ಹೆಚ್ಚು ಓದಲು ಬರದೆ ಇರುವವರು | 42 | 48 |

ಮೂಲ: ಲಾಕ್ಡ್ ಔಟ್, ಸೆಪ್ಟೆಂಬರ್ 2021[i]

ಶಿಕ್ಷಕರ ಕೊಡುಗೆ

ಇದು ಹೇಳಿದಷ್ಟು ಸುಲಭವಲ್ಲ.  ಅನೇಕ ರಾಜ್ಯಗಳು ತಮ್ಮ ಗುತ್ತಿಗೆ ಆಧಾರಿತ ಶಿಕ್ಷಕರನ್ನು ಕೆಲಸದಿಂದ ವಜಾಗೊಳಿಸಿವೆ ಅಥವಾ ಅವರ ಸಂಬಳವನ್ನು ಪಾವತಿಸಿಲ್ಲ. ಇದರಿಂದ ಶಾಲಾ ಶಿಕ್ಷಕರ ಮೇಲಿನ ಒತ್ತಡ ಇನ್ನಷ್ಟು ಹೆಚ್ಚಿರುವುದು ಕಟುವಾಸ್ತವವಾಗಿದೆ. (2018[iii]ರಲ್ಲಿ, ಪ್ರಾಥಮಿಕ ಮಟ್ಟದಲ್ಲಿ ಅವರ ಪ್ರಮಾಣ 13.80 ಶೇಕಡಾ ಮತ್ತು ಪ್ರೌಢ ಶಾಲೆಗಳಲ್ಲಿ ಅವರ ಪ್ರಮಾಣ 8.40 ಶೇಕಡಾ). ಜಾರ್ಖಂಡ್ ಮತ್ತು ಅನೇಕ ಈಶಾನ್ಯ ರಾಜ್ಯಗಳಲ್ಲಿ, ಒಟ್ಟು ಶಿಕ್ಷಕರ ಪೈಕಿ 50 ಶೇಕಡಾಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರೇ ಇದ್ದಾರೆ. ಸರ್ಕಾರಿ ಶಾಲೆಗಳಲ್ಲಿ ದಾಖಲಾತಿಯ ಹೆಚ್ಚಳವನ್ನು ನಾವು ನಿರೀಕ್ಷಿಸುತ್ತಿರುವ ಈ ಸಂದರ್ಭದಲ್ಲಿ ಶಿಕ್ಷಕರ ಲಭ್ಯತೆಗೆ ಸಂಬಂಧಿಸಿದ ಸನ್ನಿವೇಶವು ಇನ್ನಷ್ಟು ಘೋರವಾಗಿರುವಂತೆ ಕಂಡು ಬರುತ್ತದೆ.

ಮಕ್ಕಳನ್ನು ಶಾಲೆಗೆ ವಾಪಸ್ ಕರೆತರುವ ಕೆಲಸವು ಶಿಕ್ಷಕರ ಪಾಲಿಗೆ ಬೆಟ್ಟದಂತಹ ಜವಾಬ್ದಾರಿಯನ್ನು ಹೊತ್ತು ತರಲಿದೆ. ಈ ಪರಿಸ್ಥಿತಿಯು ಬೇರೆಬೇರೆ ಹಂತಗಳಲ್ಲಿ ಬೇರೆಬೇರೆ ರೀತಿಯ ಸವಾಲುಗಳನ್ನು ಒಡ್ಡಲಿದೆ. ಉದಾಹರಣೆಗೆ, 14 ವರ್ಷಗಳು ಮತ್ತು ಅದಕ್ಕಿಂತ ದೊಡ್ಡ ಮಕ್ಕಳನ್ನು ಪರಿಗಣಿಸೋಣ. ಮತ್ತೆ ಶಾಲೆಗೆ ಬರುವಂತೆ ಅವರನ್ನು ಉತ್ತೇಜಿಸುವುದು ಹೇಳಿದಷ್ಟು ಸುಲಭದ ಕೆಲಸವಲ್ಲ. ದುಡಿಯುತ್ತಿರುವ ಮಕ್ಕಳು, ಮುಖ್ಯವಾಗಿ ಕಳೆದ ಎರಡು ವರ್ಷಗಳಲ್ಲಿ ಶಾಲೆಯ ಮುಖವೇ ನೋಡದವರು ಹಾಗು ಅಂತಿಮವಾಗಿ ಹಿರಿಯ ಪ್ರಾಥಮಿಕ ಅಥವಾ ಪ್ರೌಢ ಶಾಲೆಯಲ್ಲಿದ್ದವರು ಖಂಡಿತವಾಗಿಯೂ ತಾವೇನು ಕಲಿತಿದ್ದೇವೆ ಎಂಬುದನ್ನು ಮರೆತು ಬಿಟ್ಟಿರುತ್ತಾರೆ. ಅಲ್ಲದೆ ಕುಟುಂಬದ ಆದಾಯಕ್ಕೆ ಒಂದಷ್ಟು ಕೊಡುಗೆ ನೀಡಬೇಕಾದ ವಿಪರೀತ ಒತ್ತಡವೂ ಅವರ ಮೇಲಿರುತ್ತದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ಬಡವರು, ವಲಸಿಗರು, ದಿನಗೂಲಿ ಕಾರ್ಮಿಕರು ಮತ್ತು ಅನೌಪಚಾರಿಕ ವಲಯದ ಕಾರ್ಮಿಕರು ಎದುರಿಸಿರುವ ಆರ್ಥಿಕ ಸಂಕಟವನ್ನು ನೋಡಿದರೆ, ಮಕ್ಕಳನ್ನು ಕೆಲಸದಿಂದ ಬಿಡಿಸಿ ಮತ್ತೆ ಶಾಲೆಗೆ ಕರೆತರಲು ಮೌಖಿಕ ಆಶ್ವಾಸನೆಗಿಂತಲೂ ಮಿಗಿಲಾದ ಕೆಲಸ ನಡೆಯಬೇಕಿದೆ ಎಂಬುದು ಸ್ಪಷ್ಟವಾಗುತ್ತದೆ. ಕಲಿಕೆಯ ಕುರಿತು ಸಂವಾದವೊಂದನ್ನು ಪ್ರಾರಂಭಿಸಬೇಕಾದರೆ ಇಡೀ ಕುಟುಂಬವನ್ನೇ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು.

ಪಿಡುಗಿನ ಸಂದರ್ಭದಲ್ಲಿ ವಿವಾಹ ಬಂಧನಕ್ಕೆ ಒಳಗಾದ ಹುಡುಗಿಯರ ಸಮಸ್ಯೆಯು ಇನ್ನೂ ಹೆಚ್ಚು ಸವಾಲಿನದ್ದಾಗಿರುತ್ತದೆ. ಹದಿಹರೆಯದ ಹುಡುಗಿಯರು ಶಾಲೆಗೆ ಬರಬೇಕಾದರೆ, ರೆಸಿಡೆನ್ಶಿಯಲ್ ಬ್ರಿಜ್ ಕೋರ್ಸ್ ಮಾದರಿಯ (ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ (ಡಿಪಿಇಪಿ) ಅಡಿಯಲ್ಲಿ ಇದನ್ನು ಪ್ರಯತ್ನಿಸಲಾಗಿತ್ತು) ಅಥವಾ ಕಸ್ತೂರ್ಬಾ ಗಾಂಧಿ ಬಾಲಿಕಾ ವಿದ್ಯಾಲಯ (ಕೆಜಿಬಿವಿ) ಮಾದರಿ ಅಥವಾ ಹಿಂದೆ ಮಹಿಳಾ ಸಮಖ್ಯ ಕಾರ್ಯಕ್ರಮವಾಗಿದ್ದ ಮಹಿಳಾ ಶಿಕ್ಷಣ ಕೇಂದ್ರ ಮಾದರಿ) ಮರುಪರಿಶೀಲನೆ ಮತ್ತು ಮರುವಿನ್ಯಾಸ ಮಾಡುವುದು ಅತ್ಯಗತ್ಯವೆನಿಸುತ್ತದೆ. ಆಸಕ್ತಿಯ ವಿಚಾರವೆಂದರೆ, ಹುಡುಗರನ್ನೂ ಶಾಲೆಗೆ ಮರಳಿ ತರಬೇಕಾದರೆ ಅವರಿಗೂ ಇದೇ ರೀತಿಯ ವಸತಿ ಶಾಲೆಗಳು/ ಕಾರ್ಯಕ್ರಮಗಳು ಬೇಕು ಎಂದು ಅನೇಕ ಸರ್ಕಾರೇತರ ಸಂಸ್ಥೆಗಳು ಹೇಳುವುದನ್ನು ನಾನು ಕೇಳಿದ್ದೇನೆ. ಎರಡರಿಂದ ಮೂರು ವರ್ಷಗಳ ಕಾಲ ವೇಗವರ್ಧಿತ ಕಲಿಕೆ ಕಾರ್ಯಕ್ರಮಗಳನ್ನು ಆಯೋಜಿಸಿದರೆ ಅವರು ಹಿರಿಯ ಪ್ರಾಥಮಿಕ ಮಟ್ಟವನ್ನು ದಾಟಿ ಹತ್ತನೇ ತರಗತಿಯನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತದೆ.

ಈ ಪಿಡುಗಿನ ನಂತರದ ವಿವಿಧ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಚ್ಚಿನ ನಿಧಿಯ ವ್ಯವಸ್ಥೆ ಮಾಡಬೇಕು. ಸರ್ಕಾರೇತರ ಸಂಸ್ಥೆಗಳ ನಡುವೆ ನಡೆದ ಚರ್ಚೆಯ ವೇಳೆ ಬಂದ ಇನ್ನೊಂದು ಸಲಹೆ ಏನೆಂದರೆ, ಶಾಲೆಗಳಿಗೆ ಹೆಚ್ಚುವರಿ ನೆರವು ಒದಗಿಸುವುದಕ್ಕಾಗಿ ಪ್ರಾಯೋಗಿಕವಾಗಿ ಮನ್‌ರೇಗಾ ನಿಧಿಯನ್ನು ಬಳಸುವುದು. ಒಂದು ವರ್ಷ ಅಥವಾ ಎರಡು ವರ್ಷಗಳ ಕಾಲ ಹೀಗೆ ಮಾಡುವುದರೊಂದಿಗೆ ಸ್ಥಳೀಯ ಸುಶಿಕ್ಷಿತ ವ್ಯಕ್ತಿಗಳನ್ನು ಶಾಲೆಗೆ ಬರುವಂತೆ ಮಾಡುವ ಆಯ್ಕೆಯನ್ನು ಸಹ ಪರಿಶೀಲಿಸಬಹುದು.  ಕಡಿಮೆ ವೆಚ್ಚದಲ್ಲಿ ಶಿಕ್ಷಣ ಒದಗಿಸುವ ಅನೇಕ ಖಾಸಗಿ ಶಾಲೆಗಳ ಶಿಕ್ಷಕರು ಕೆಲಸ

ಕಳೆದುಕೊಂಡಿದ್ದಾರೆ. ಕನಿಷ್ಠ ಖಾಸಗಿ ಶಾಲೆಗಳು ಪುನರಾರಂಭಗೊಳ್ಳುವ ತನಕವಾದರೂ ಇಂತಹ ವ್ಯಕ್ತಿಗಳಿಗೆ ಇದು ಅವಕಾಶ ಒದಗಿಸಲಿದೆ. ರೆಸಿಡೆನ್ಶಿಯಲ್ ಬ್ರಿಜ್ ಕೋರ್ಸುಗಳು/ವೇಗವರ್ಧಿತ ಕಲಿಕೆ ಕಾರ್ಯಕ್ರಮಗಳ ಮರುಪರಿಚಯ; ಹುಡುಗಿಯರು ಮತ್ತು ಹುಡುಗರಿಗಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಇನ್ನೂ ಹೆಚ್ಚಿನ ಕೆಜಿಬಿವಿಗಳನ್ನು ಪ್ರಾರಂಭಿಸುವುದು, ಹೊಸ ಶಾಲೆಗಳನ್ನು ತೆರೆಯುವುದು ಅಥವಾ ಈಗ ಇರುವ ಶಾಲೆಗಳ ಸಾಮರ್ಥ್ಯವನ್ನು ವೃದ್ಧಿಸುವುದು (ಖಾಸಗಿ ಶಾಲೆಗಳನ್ನು ಬಿಟ್ಟ ಮಕ್ಕಳಿಗಾಗಿ ಅವಕಾಶ ಕಲ್ಪಿಸಲು) ಮತ್ತು ಅತ್ಯಂತ ಪ್ರಮುಖವಾಗಿ ಎಲ್ಲಾ ಹಂತಗಳಲ್ಲಿ ಹೆಚ್ಚಿನ ಶಿಕ್ಷಕರನ್ನು ನೇಮಿಸುವುದನ್ನು ಪರಿಗಣಿಸಬೇಕು. ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020ರಲ್ಲಿ ಶಿಫಾರಸ್ಸು ಮಾಡಲಾಗಿರುವ ಶಾಲಾ ಸಂಕೀರ್ಣದ ಚಿಂತನೆಯು, ಯೋಜನೆ ಮತ್ತು ಅನುಷ್ಠಾನ ಪ್ರಕ್ರಿಯೆಯನ್ನು ಪ್ರಾರಂಭಿಸಲು ಊರುಗೋಲು ಎನಿಸಲಿದೆ.ಒಂದರಿಂದ ಹನ್ನೆರಡನೆಯ ತರಗತಿಯ ತನಕ ಎಲ್ಲಾ ಹಂತಗಳ ಶಿಕ್ಷಕರಿಗೂ, ಕೋವಿಡ್ ಪಿಡುಗಿನ ನಂತರ ಅವರು ಎದುರಿಸಬಹುದಾದ ಸಮಸ್ಯೆಗಳು, ಸವಾಲುಗಳು ಮತ್ತು ಅವಕಾಶಗಳ ಕುರಿತು ಮನವರಿಕೆ ಮಾಡಬೇಕು. ಎಸ್‌ಸಿಇಆರ್‌ಟಿ ಗುರುತಿಸಿದ ಶಿಕ್ಷಕ ಬೋಧಕರು, ಸಂಪನ್ಮೂಲ ವ್ಯಕ್ತಿಗಳು ಹಾಗು ಮಕ್ಕಳ ಕೇಂದ್ರಿತ ಬೋಧನೆ-ಕಲಿಕೆಯಲ್ಲಿ ಅನುಭವ ಹೊಂದಿರುವ ಸರ್ಕಾರೇತರ ಸಂಸ್ಥೆಗಳ ಕಾರ್ಯಕರ್ತರನ್ನು ಗುರುತಿಸಬಹುದಾದ ಕ್ಷೇತ್ರ ಸಂಪನ್ಮೂಲ ಕೇಂದ್ರ ಮತ್ತು ವಲಯ ಸಂಪನ್ಮೂಲ ಕೇಂದ್ರ (ಸಿಆರ್‌ಸಿ) ಮುಂತಾದ ಜಿಲ್ಲಾ ಮತ್ತು ಉಪ ಜಿಲ್ಲಾ ಸಂಸ್ಥೆಗಳಿಗೆ ಇದು ದೊಡ್ಡ ಪ್ರಮಾಣದಲ್ಲಿ ಬೇಡಿಕೆಯನ್ನುಂಟು ಮಾಡುತ್ತದೆ. ಮಕ್ಕಳ ವಿವಿಧ ಅಗತ್ಯತೆಗಳಿಗೆ ಪ್ರತಿಕ್ರಿಯಿಸಲು ಶಿಕ್ಷಕರು ಯೋಜನೆ ರೂಪಿಸಲು ನೆರವು ಒದಗಿಸುವುದಕ್ಕಾಗಿ ಚಲನಶೀಲ ಮತ್ತು ಸಂವಾದನಾತ್ಮಕ ತರಬೇತಿ ಘಟಕಗಳನ್ನು ಸಿದ್ಧಪಡಿಸುವುದಕ್ಕಾಗಿ ರಾಜ್ಯ ಸರ್ಕಾರಗಳು ಕನಿಷ್ಠ ಕೆಲವು ತಿಂಗಳುಗಳ ಮೊದಲೇ ಪೂರ್ವಸಿದ್ಧತೆ ಮಾಡಬೇಕು. ವಿವೇಚನೆ ಇಲ್ಲದೆ ಪಠ್ಯಕ್ರಮದಿಂದ ವಿಷಯಗಳನ್ನು ಕಡಿತಗೊಳಿಸುವುದು ಸಲ್ಲದು. ಮಕ್ಕಳು ಎಲ್ಲಿ ನಿಲ್ಲಿಸಿದ್ದರೋ ಅಲ್ಲಿಂದ ಮತ್ತೆ ಪ್ರಾರಂಭಿಸಲು ಹಾಗು ಕಲಿಕೆಯ ಏಣಿಯಲ್ಲಿ ಮೆಲ್ಲನೆ ಮತ್ತು ನಾಜೂಕಿನಿಂದ ಮೇಲೇರಲು ಶಿಕ್ಷಕರು ಪ್ರತಿ ಮಗುವಿಗೂ ನೆರವು ಒದಗಿಸಬೇಕು. ಬುನಾದಿ ಕಲಿಕೆ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಲು ಮಾಡುವ ಇತ್ತೀಚಿನ ಪ್ರಯತ್ನಗಳು ತುಂಬಾ ಪ್ರಮುಖವೆನಿಸಬಹುದು. ಹೀಗಾಗಿ ಶಿಕ್ಷಕರು ತರಗತಿಯ ಪರಿಸ್ಥಿತಿಗೆ ಅನುಗುಣವಾಗಿ ಪ್ರತಿಕ್ರಿಯಿಸಲು ಸ್ವಾತಂತ್ರ್ಯ ದೊರೆಯುತ್ತದೆ ಮಾತ್ರವಲ್ಲದೆ ಮಕ್ಕಳು ಕಲಿಕೆಯ ನಷ್ಟವನ್ನು ಸರಿದೂಗಿಸಲು ನೆರವು ಒದಗಿಸುವುದಕ್ಕಾಗಿ ಕನಿಷ್ಠ ಆರು ತಿಂಗಳುಗಳ ಉತ್ಪಾದಕ ಅವಧಿಯನ್ನು ಒದಗಿಸಲಾಗುತ್ತದೆ.ಸೂಚಿಸಲಾದ ಪರಿಹಾರಗಳು

ಶೈಕ್ಷಣಿಕ ಆಡಳಿತಗಾರರು ಮತ್ತು ಶಿಕ್ಷಕರ ಮನೋಸ್ಥಿತಿಯು ನಾವು ಎದುರಿಸುತ್ತಿರುವ ಅತ್ಯಂತ ದೊಡ್ಡ ಸವಾಲುಗಳಲ್ಲಿ ಪ್ರಮುಖವಾದುದು. ಮಕ್ಕಳ ಜೊತೆಗಿನ ಏಕಮುಖ ಸಂವಹನವು ಯಾವುದೇ ಫಲ ನೀಡಿಲ್ಲ ಹಾಗು ಇದು ಯಾವುದೇ ಧನಾತ್ಮಕ ಫಲಿತಾಂಶವನ್ನು ನೀಡುವುದು ಕಷ್ಟಕರ. ಪ್ರತಿ ಮಗುವಿನ ಜೊತೆ ಒಡನಾಟ ಸಾಧಿಸುವುದಕ್ಕಾಗಿ ನಮ್ಮ ಕಲಿಕಾ ವಿಧಾನದಲ್ಲಿ ಅಮೂಲಾಗ್ರ ಬದಲಾವಣೆಯ ಅಗತ್ಯವಿದೆ. ಕೆಲವು ಆಡಳಿತಗಾರರು ಸಮಯ ಮಿತಿಯ ಬುನಾದಿ ಕೌಶಲ್ಯ ಘಟಕಗಳ ಕುರಿತು ಮಾತನಾಡುತ್ತಿದ್ದಾರೆ. ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನದ ಕುರಿತು ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳ ಅನುಭವವು, ಮೊದಲೇ ವಿನ್ಯಾಸಗೊಳಿಸಿದ ಘಟಕವು ಇದಕ್ಕೆ ಪರಿಹಾರವಲ್ಲ ಎನ್ನುವುದನ್ನು ದೃಢಪಡಿಸಿದೆ. ಮಕ್ಕಳಿಗಾಗಿ ಓದಲು ಮತ್ತು ಮಕ್ಕಳು ಪರಸ್ಪರರಿಗಾಗಿ ಓದಲು ಕಥೆಗಳ ಸಂಯೋಜನೆಯನ್ನು ಬಳಸುವುದು, ವಿಚಾರಗಳು ಮತ್ತು ಚಟುವಟಿಕೆಗಳೊಂದಿಗೆ ಅವರನ್ನು ತೊಡಗಿಸಿಕೊಳ್ಳುವುದು ಮುಂತಾದವುಗಳ ಮೂಲಕ ಅವರು ಓದುವುದು ಮತ್ತು ಬರೆಯುವುದನ್ನು ಆನಂದಿಸುವಂತೆ ಉತ್ತೇಜಿಸಬಹುದು. ಲಾಕ್‌ಡೌನ್ ಅವಧಿಯಲ್ಲಿ ಗಣಿತ, ವಿಜ್ಞಾನ, ಸ್ಥಳೀಯ ಇತಿಹಾಸ ಮತ್ತು ಪರಿಸರದ ಕುರಿತು ಇದೇ ರೀತಿಯ ಚಟುವಟಿಕೆಗಳನ್ನು ಕೈಗೊಳ್ಳುವುದರಿಂದ ಮಕ್ಕಳು ಪರಸ್ಪರ ಮಾತ್ರವಲ್ಲದೆ ಕಲಿಕೆಯ ಪ್ರಕ್ರಿಯೆಯ ಜೊತೆಗೂ ಸಂಪರ್ಕ ಸಾಧಿಸುವಂತೆ ಮಾಡಬಹುದು.

ಈ ಪ್ರಕ್ರಿಯೆಗೆ ಚಾಲನೆ ನೀಡಿದ ನಂತರ, ಮಕ್ಕಳ ಜೊತೆ ಮಾತನಾಡಲು, ಅವರ ಅನುಭವಗಳನ್ನು ಆಲಿಸಲು, ವಿವಿಧ ವಿಷಯಗಳಲ್ಲಿ ಅವರು ಎಷ್ಟು ಜ್ಞಾನವನ್ನು ಹೊಂದಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ಮತ್ತು ಪ್ರತಿ ವಿಷಯದಲ್ಲಿ ಒಂದೇ ಮಟ್ಟದಲ್ಲಿರುವ ಮಕ್ಕಳ ಸಣ್ಣ ಪಂಗಡವನ್ನು ರಚಿಸಲು ಮತ್ತು ಕಲಿಕೆಯಲ್ಲಿ ಅವರು ಮುಂದೆ ಸಾಗುವುದಕ್ಕಾಗಿ

ಯೋಜನೆಯೊಂದನ್ನು ರೂಪಿಸಲು ಎಲ್ಲಾ ಶಾಲಾ ಶಿಕ್ಷಕರು ಮೊದಲ ಕೆಲವು ಅಥವಾ ಹೆಚ್ಚಿನ ವಾರಗಳನ್ನು ಮೀಸಲಿಡಬೇಕು. ಮಕ್ಕಳು ಬೇರೆಬೇರೆ ವಿಷಯಗಳಲ್ಲಿ ಬೇರೆಬೇರೆ ಮಟ್ಟಗಳಲ್ಲಿರುವುದು ಸಹಜವೇ. ಅಲ್ಲದೆ ಕೆಲವು ಮಕ್ಕಳು ಇತರರಿಗಿಂತ ಹೆಚ್ಚಿನ ಆಘಾತಕ್ಕೆ ಒಳಗಾಗಿರುವುದನ್ನು ಅಲ್ಲಗಳೆಯುವಂತಿಲ್ಲ. ಖಾಸಗಿ ಶಾಲೆಯಿಂದ ಸರ್ಕಾರಿ ಶಾಲೆಗೆ, ನಗರ/ಪಟ್ಟಣದಿಂದ ಹಳ್ಳಿಗೆ ಅಥವಾ ಒಂದು ನಗರದಿಂದ ಇನ್ನೊಂದು ನಗರಕ್ಕೆ ಸ್ಥಳಾಂತರಗೊಂಡಿರುವ ಮಕ್ಕಳ ವಿಚಾರದಲ್ಲಿ ಹೀಗೆ ಆಗುವುದು ಅಚ್ಚರಿಯ ವಿಷಯವೇನಲ್ಲ. ಮಕ್ಕಳು ಮೊದಲ ದಿನದಿಂದಲೇ ಸಹಜತೆಗೆ ಮರಳಬೇಕು ಎಂದು ನಿರೀಕ್ಷಿಸಲಾಗದು. ಹೀಗಾಗಿ ಶಾಲೆ ಪುನರಾರಂಭಗೊಳ್ಳುವ ಕನಿಷ್ಠ ಹತ್ತರಿಂದ ಹದಿನೈದು ದಿನಗಳ ಮೊದಲು ಸಭೆ ಸೇರಬೇಕು ಮತ್ತು ಎಚ್ಚರಿಕೆಯಿಂದ ಚಟುವಟಿಕೆಗಳನ್ನು ಯೋಜಿಸಬೇಕು.ಮಕ್ಕಳ ಅಗತ್ಯತೆಗಳು ಹಾಗು ಅವರು ಎದುರಿಸುತ್ತಿರುವ ಸಮಸ್ಯೆಗಳ ಮೇಲೆ ಬೆಳಕು ಹರಿಸುವ, ಪ್ರತಿ ಮಗುವನ್ನು ಸೂಕ್ಷ್ಮತೆಯಿಂದ ನೋಡಿಕೊಳ್ಳುವ ಮತ್ತು ಅತ್ಯಂತ ಪ್ರಮುಖವಾಗಿ ಶಾಲಾ ಬದುಕನ್ನು ಆನಂದಿಸುವಂತೆ ಮಾಡುವ ವಾತಾವರಣವನ್ನು ರೂಪಿಸುವ ಸಾಮರ್ಥ್ಯ/ಕೌಶಲ್ಯ ಎಲ್ಲಾ ಶಿಕ್ಷಕರ ಬಳಿ ಇರಲಾರದು. ಅಲ್ಪಾವಧಿ ಮತ್ತು ಮಧ್ಯಮಾವಧಿಯಲ್ಲಿ ಪ್ರತಿ ತರಗತಿಯು ಕನಿಷ್ಠ ಎರಡು ಶಿಕ್ಷಕರನ್ನು ಹೊಂದಿರುವಂತೆ ರಾಜ್ಯ ಸರ್ಕಾರಗಳು ವ್ಯವಸ್ಥೆ ಮಾಡಬೇಕು. ಅಗತ್ಯ ಬಿದ್ದಲ್ಲಿ ಹೆಚ್ಚಿನ ಶಿಕ್ಷಕರನ್ನು ನೇಮಿಸಬೇಕು ಅಥವಾ ತರಗತಿಯಲ್ಲಿ ಕಲಿಸುವುದಕ್ಕಾಗಿ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕು. ಪ್ರತಿ ಮಗುವಿಗೂ ಗಮನ ನೀಡುವ ಕುರಿತು ಹಾಗು ಮಗು ಎಲ್ಲಿ ಕಲಿಕೆಯನ್ನು ನಿಲ್ಲಿಸಿತ್ತೋ, ಅಲ್ಲಿಂದಲೇ ಕಲಿಕೆಯನ್ನು ಪ್ರಾರಂಭಿಸುವ ಕುರಿತು  ನಾವು ಗಂಭೀರತೆಯನ್ನು ಹೊಂದಿದ್ದರೆ 25 ಮಕ್ಕಳ ಗುಂಪಿಗೆ ಕನಿಷ್ಠ ಇಬ್ಬರು ಶಿಕ್ಷಕರ ಅಗತ್ಯವಿದೆ. ಜೊತೆಗೆ ಮಕ್ಕಳು ತಮ್ಮ ಭಯ ಮತ್ತು ಆತಂಕವನ್ನು ವ್ಯಕ್ತಪಡಿಸಲು, ಅವರ ಅನುಭವಗಳ ಕುರಿತು ಮುಕ್ತವಾಗಿ ಮಾತನಾಡಲು ಮತ್ತು ಇತರ ಅನೇಕ ಮಕ್ಕಳು ಸಹ ಅದೇ ರೀತಿಯ ಅನುಭವಗಳನ್ನು ಹೊಂದಿದ್ದಾರೆ ಎಂಬುದನ್ನು ಕಾಲ ಕ್ರಮೇಣ ಅವರು ಅರಿತುಕೊಳ್ಳಲು ನಿರಂತರ ಚಟುವಟಿಕೆಗಳನ್ನು ನಡೆಸಬೇಕಾಗಬಹುದು. 'ಸಮರೋಪಾದಿ' ಎನ್ನುವ ಪದವು ಸಾಕಷ್ಟು ವಿಮರ್ಶೆಗೆ ಒಳಗಾಗಿದ್ದರೂ, ನಮಗೀಗ ಬೇಕಿರುವುದು ಚಟುವಟಿಕೆಗಳ ತೀವ್ರ ಹಂತ. ಆಗ ಮಾತ್ರವೇ ಮಕ್ಕಳು ಶಾಲೆಗೆ ಮರಳುವ, ಮತ್ತು ಸಹಪಾಠಿಗಳು ಮತ್ತು ಮಿತ್ರರ ಜೊತೆ ಮತ್ತೆ ಸಂಪರ್ಕ ಸಾಧಿಸುವ ಮತ್ತು ಶಿಕ್ಷಕರು ಮತ್ತು ಬೋಧನೆ-ಕಲಿಕೆ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಕಠಿಣ ಹಂತವನ್ನು ದಾಟಬಹುದು. ಮಕ್ಕಳು ಸಾಕಷ್ಟು ಹೊಂದಾಣಿಕೆ ಮಾಡಿಕೊಳ್ಳುವ ಅಗತ್ಯವಿದೆ.

ಅನೇಕ ಅಂತಾರಾಷ್ಟ್ರೀಯ ತಜ್ಞರು 'ಹೈಬ್ರಿಡ್' ಮಾದರಿಯ ಕುರಿತು ಮಾತನಾಡಿದ್ದಾರೆ. ಆನ್‌ಲೈನ್ ಅಥವಾ ಎಲೆಕ್ಟ್ರಾನಿಕ್ ಸಂಪನ್ಮೂಲಗಳ ಮೂಲಕ ವ್ಯಕ್ತಿಯಿಂದ ವ್ಯಕ್ತಿಗೆ ಮುಖಾಮುಖಿ ಸಂವಾದವನ್ನು ನಡೆಸುವ ಮಾದರಿಯಿದು. ಇಲ್ಲೂ ಸಹ ಮಕ್ಕಳ ವಯಸ್ಸನ್ನು ಗಮನದಲ್ಲಿಟ್ಟುಕೊಳ್ಳುವುದು ಅವಶ್ಯಕ. ಇಂತಹ ಪ್ರಯೋಗವು ಪ್ರೌಢ/ ಉನ್ನತ ಪ್ರೌಢ ಮಟ್ಟಗಳಲ್ಲಿ ಸಾಕಷ್ಟು ಉಪಯುಕ್ತವೆನಿಸಿದರೂ, ದೇಶದಾದ್ಯಂತ ಇರುವ ಪ್ರಾಥಮಿಕ ಶಾಲೆಗಳಿಗೆ ಇದು ಸೂಕ್ತ ಆಯ್ಕೆ ಎನಿಸದು. ಗ್ರಾಮೀಣ ಭಾಗಗಳಲ್ಲಿರುವ ಪ್ರಾಥಮಿಕ ಶಾಲೆಗಳು ಕಳಪೆ ಮೂಲಸೌಕರ್ಯ, ವಿದ್ಯುಚ್ಛಕ್ತಿ ಪೂರೈಕೆಯಲ್ಲಿ ವ್ಯತ್ಯಯ, ಶಾಲೆಯಲ್ಲಿ ಬಳಸಲು ಕಂಪ್ಯೂಟರ್‌ಗಳು/ಪ್ರಾಜೆಕ್ಟರ್‌ಗಳ ಕೊರತೆ ಮುಂತಾದ ಹೆಚ್ಚುವರಿ ಸವಾಲುಗಳನ್ನು ಎದುರಿಸುತ್ತವೆ. ನಗರ ಪ್ರದೇಶಗಳಲ್ಲಿ ಯಾವುದೇ ಕಾರ್ಯಸಾಧು ಎನಿಸುತ್ತದೋ ಅದು ಗ್ರಾಮೀಣ ಭಾಗಗಳಲ್ಲಿ ಕಾರ್ಯಸಾಧು ಎನಿಸುವುದಿಲ್ಲ. ಏಕೆಂದರೆ ಒಂದು ಕಡೆ ಯಶಸ್ವಿಯಾಗುವ ಸೂತ್ರವು ಇನ್ನೊಂದೆಡೆ ಯಶಸ್ವಿಯಾಗದು.ತಕ್ಷಣ ಕ್ರಮ ತೆಗೆದುಕೊಳ್ಳುವುದು

ಈ ಎಲ್ಲಾ ಅಂಶಗಳು, ಶಿಕ್ಷಕರನ್ನು ನಾವು ತಕ್ಷಣವೇ ಸಕ್ರಿಯಗೊಳಿಸಬೇಕು ಮತ್ತು ಯೋಜನಾ ಪ್ರಕ್ರಿಯೆಯಲ್ಲಿ ಅವರನ್ನು ಒಳಗೊಳ್ಳಬೇಕು ಎನ್ನುವುದನ್ನು ಸೂಚಿಸುತ್ತವೆ. ಈ ವಿಚಾರಗಳನ್ನು ಚರ್ಚಿಸಲು ಪ್ರಾರಂಭಿಸಿ, ಅವರು ನಿರೀಕ್ಷಿಸುವ ಸವಾಲುಗಳನ್ನು ವ್ಯಕ್ತಪಡಿಸಲು ಅವರನ್ನು ಉತ್ತೇಜಿಸಿ ಹಾಗು ನೈಜ ಚಿತ್ರಣವನ್ನು ಪಡೆಯುವುದಕ್ಕಾಗಿ ಅವರು ಮನೆ ಮನೆಗಳಿಗೆ ಭೇಟಿ ನೀಡಲು ಉತ್ತೇಜಿಸಬೇಕು. ಶಾಲೆಗಳ ಪುನರಾರಂಭದ ದಿನಾಂಕವನ್ನು ಘೋಷಿಸುವ ಸರ್ಕಾರಗಳು, ಉಳಿದೆಲ್ಲವನ್ನು ಶಿಕ್ಷಕರು ಎಂದಿನಂತೆ ಮುಂದುವರಿಸಬೇಕು ಎಂದು ನಿರೀಕ್ಷಿಸುವುದು ನಿಜಕ್ಕೂ ಬೇಸರದ ಸಂಗತಿಯಾಗಿದೆ. ಅನೇಕ ರಾಜ್ಯಗಳಲ್ಲಿ, ಪ್ರೌಢ ಶಾಲೆಗಳು ಕಾರ್ಯಾರಂಭಗೊಂಡಿವೆ. ಆನ್‌ಲೈನ್ ವಿಧಾನ ಅಥವಾ ಕಾರ್ಯಹಾಳೆಗಳು ಮತ್ತು

ಮನೆಗೆಲಸದ ಮೂಲಕ ತಮಗೆ ಪರಿಣಾಮಕಾರಿಯಾಗಿ ಕಲಿಯಲು ಸಾಧ್ಯವಾಗಿಲ್ಲ ಎನ್ನುವ ಪ್ರತಿಕ್ರಿಯೆಯು ನಗರ ಪ್ರದೇಶಗಳ ಮಕ್ಕಳಿಂದ ವ್ಯಕ್ತವಾಗಿದೆ. ಹತ್ತರಿಂದ ಹನ್ನೆರಡನೆಯ ತರಗತಿಗಳಲ್ಲಿ ಈ ಮಟ್ಟವು ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ವ್ಯತ್ಯಯಗೊಳ್ಳುತ್ತದೆ. ನಗರ ಪ್ರದೇಶಗಳಲ್ಲೇ ಪರಿಸ್ಥಿತಿ ಈ ರೀತಿ ಇದ್ದರೆ, ಗ್ರಾಮೀಣ ಮತ್ತು ದೂರದ ಪ್ರದೇಶಗಳಲ್ಲಿ ಪರಿಸ್ಥಿತಿ ಹೇಗಿರಬಹುದು ಎಂಬುದನ್ನು ನಾವು ಚೆನ್ನಾಗಿ ಊಹಿಸಬಹುದು.

ಶಿಕ್ಷಕರ ಮಾತನ್ನು ಕಡೆಗಣಿಸಿದರೆ ಎಂದಿಗೂ ಧನಾತ್ಮಕ ಫಲಿತಾಂಶ ದೊರೆಯುವುದಿಲ್ಲ. ಸವಾಲುಗಳನ್ನು ಗುರುತಿಸಲು, ಪರಿಹಾರಗಳನ್ನು ಹುಡುಕಲು, ಸವಾಲುಗಳನ್ನು ಹೇಗೆ ಮೆಟ್ಟಿ ನಿಲ್ಲಬಹುದು ಎಂಬ ಕುರಿತು ಮತ್ತು ಸನ್ನಿವೇಶವನ್ನು ಆಧರಿಸಿದ ವಿಸ್ತೃತ ಯೋಜನೆಗಳನ್ನು ರೂಪಿಸಲು ಅವರನ್ನು ಪಾಲುದಾರರಾಗಿ ಒಳಗೊಳ್ಳುವುದು ಹಾಗು ಸಾಕಷ್ಟು ಪ್ರಮಾಣದಲ್ಲಿ ಮಾನವ ಮತ್ತು ಹಣಕಾಸು ಸಂಪನ್ಮೂಲಗಳನ್ನು ಒದಗಿಸುವುದು ನಮ್ಮ ಮುಂದಿರುವ ದಾರಿಯಾಗಿದೆ. ಈ ಕುರಿತು ಯಾವುದೇ ಸುಲಭದ ದಾರಿ ಅಥವಾ 'ಮ್ಯಾಜಿಕ್ ಬುಲ್ಲೆಟ್'ಗಳು ಲಭ್ಯವಿಲ್ಲ. ಪ್ರತಿ ಶಾಲಾ ಸಂಕೀರ್ಣಕ್ಕೆ, ಶಿಕ್ಷಕರು, ಶಾಲಾ ಮುಖ್ಯಸ್ಥರು ಮತ್ತು ಆಡಳಿತರಾರರನ್ನು ಪಾಲುದಾರರಾಗಿ ಒಳಗೊಂಡು ವ್ಯವಸ್ಥಿತವಾಗಿ ಯೋಜನೆ ರೂಪಿಸಬೇಕು ಮತ್ತು ಸರ್ಕಾರಿ ಶಾಲೆಗಳ ಪುನಶ್ಚೇತನಕ್ಕಾಗಿ ಪೋಷಕರನ್ನೂ ಪಾಲುದಾರರಾಗಿಸುವ ಹೊಸ ಪಾತ್ರವನ್ನು ನಿಯೋಜಿಸಬೇಕು.

ಅಡಿಟಿಪ್ಪಣಿಗಳು

i ನಿರಾಲಿ ಬಾಖ್ಲ, ರೀತಿಕಾ ಖೇರಾ, ಜೀನ್ ಡ್ರಿಜ್, ವಿಪುಲ್ ಪೈಕ್ರಾ. 2021. ಲಾಕ್ಡ್ ಔಟ್: ಎಮರ್ಜೆನ್ಸಿ ರಿಪೋರ್ಟ್ ಆನ್ ಸ್ಕೂಲ್ ಎಜುಕೇಶನ್, 6 ಸೆಪ್ಟೆಂಬರ್ 2021.

Ii ಎಎಸ್ಇಆರ್: ಆನುವಲ್ ಸ್ಟೇಟಸ್ ಆಫ್ ಎಜುಕೇಶನ್ ರಿಪೋರ್ಟ್

iii ವಿಮಲಾ ರಾಮಚಂದ್ರನ್, ದೀಪಾ ದಾಸ್, ಗಣೇಶ್ ನಿಗಮ್ ಮತ್ತು ಅಂಜಲಿ ಶಾಂಡಿಲ್ಯಾ. 2020. ಕಾಂಟ್ರಾಕ್ಟ್ ಟೀಚರ್ಸ್ ಇನ್ ಇಂಡಿಯಾ: ರೀಸೆಂಟ್ ಟ್ರೆಂಡ್ಸ್ ಅಂಡ್ ಕರೆಂಟ್ ಸ್ಟೇಟಸ್. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಬೆಂಗಳೂರು.

ಉಲ್ಲೇಖಗಳು

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಲಾಸ್ ಆಫ್ ಲರ್ನಿಂಗ್ ಡ್ಯುರಿಂಗ್ ದ ಪ್ಯಾಂಡೆಮಿಕ್, ಫೆಬ್ರುವರಿ 2021
ಎಎಸ್ಇಅರ್ ಸಮೀಕ್ಷೆ 2020 ಅಲೆ 1 ಮತ್ತು ಎಎಸ್ಇರ್ ಕರ್ನಾಟಕ, ಸೆಪ್ಟೆಂಬರ್ 2021 ಲಾಕ್ಡ್ ಔಟ್: ಎಮರ್ಜೆನ್ಸಿ ರಿಪೋರ್ಟ್ ಅನ್ ಸ್ಕೂಲ್ ಎಜುಕೇಶನ್, ಸೆಪ್ಟೆಂಬರ್ 2021
2020 ಮತ್ತು 2021ರಲ್ಲಿ ರಾಜ್ಯ ಸರ್ಕಾರಗಳು ಮತ್ತು ಎನ್‌ಜಿಒಗಳು ನಡೆಸಿದ ಅನೇಕ ಉಪಕ್ರಮಗಳು

ವಿಮಲಾ ರಾಮಚಂದ್ರನ್ ಅವರು ಈ ಹಿಂದೆ ನವದೆಹಲಿಯ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಅಫ್ ಎಜುಕೇಶನಲ್ ಪ್ಲಾನಿಂಗ್ ಅಂಡ್ ಅಡ್ಮಿನಿಸ್ಟ್ರೇಶನ್ (ಎನ್ಐಇಪಿಎ)ನ ಟೀಚರ್ ಮ್ಯಾನೇಜ್‌ಮೆಂಟ್‌ನ ರಾಷ್ಟ್ರೀಯ ಫೆಲೋ ಮತ್ತು ಪ್ರಾಧ್ಯಾಪಕರಾಗಿದ್ದರು. ಅವರು ಇಆರ್‌ಯು ಕನ್ಸಲ್ಟಂಟ್ಸ್ ಪ್ರೈವೇಟ್ ಲಿಮಿಟೆಡ್‌ನ ಮಾಜಿ ನಿರ್ದೇಶಕರೂ ಆಗಿದ್ದಾರೆ. ಸದ್ಯ ಅವರು ನಿವೃತ್ತರಾಗಿದ್ದು ಜೈಪುರದಲ್ಲಿ ವಾಸಿಸುತ್ತಿದ್ದಾರೆ. ಅವರನ್ನು vimalar.ramachandran@gmail.com ಮೂಲಕ ಸಂಪರ್ಕಿಸಬಹುದು.